**ಕರ್ನಾಟಕ ಸರ್ಕಾರದ ನಡವಳಿ**

ವಿಷಯ: ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರು ಸಾರ್ವಜನಿಕ ನೌಕರರಾಗಿ ದುರ್ವತನೆಯಿಂದ ನಡೆದುಕೊಂಡಿದ್ದರ ನಡವಳಿಕೆ ಕುರಿತು.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪತ್ರ ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್–932/2014/ಪಿ.ಪಿ., ದಿನಾಂಕ:09–05–2018

**ಪ್ರಸ್ತಾವನೆ :**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3)ರ ಅಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ,

ಶ್ರೀ ದೇವದಾಸ ಹೆಗ್ಡೆ ಬಿನ್ ಲೇಟ್ ಚಂದ್ರಹಾಸ ಹೆಗ್ಡೆ, ನ್ಯಾರ್ಮ ಹೊಸ ಮನೆ, ಶಿರ್ವ ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ದೂರುದಾರರು)ವರು ಸಲ್ಲಿಸಿದ ದೂರಿನಲ್ಲಿ ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮತ್ತು ಶ್ರೀ ಹಸನಬಾ ಶೇಖ್, ಅಧ್ಯಕ್ಷರು, ಶಿರ್ವ ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ,(ಎದುರುದಾರರು)ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

ದೂರಿನ ಸಂಕ್ಷಿಪ್ತ ವಿವರ: ಶ್ರೀ ದೇವದಾಸ ಹೆಗ್ಡೆ ಬಿನ್ ಲೇಟ್ ಚಂದ್ರಹಾಸ ಹೆಗ್ಡೆ, ನ್ಯಾರ್ಮ ಹೊಸ ಮನೆ, ಶಿರ್ವ ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ದೂರುದಾರರು) ಸಲ್ಲಿಸಿದ ದೂರಿನಲ್ಲಿ " ದೂರುದಾರರ ಕುಟುಂಬಕ್ಕೆ ಸಂಬಂಧಪಟ್ಟಂತೆ ಸ್ಥಿರ ಆಸ್ತಿಗಳು ಶಿರ್ವ ಗ್ರಾಮದಲ್ಲಿದ್ದು, ಸಾರ್ವಜನಿಕ ಉಪಯೋಗಕ್ಕೆ ಸ್ವತ್ತುಗಳನ್ನು ದಾನ ಮಾಡಿರುತ್ತಾರೆ. 15 ಮತ್ತು 16ನೇ ವಾರ್ಡ್‌ನಲ್ಲಿ ನಿರ್ಮಿಸಿದ ರಸ್ತೆಯು ಸುಮಾರು 100 ವರ್ಷಗಳ ಹಳೆಯ ರಸ್ತೆಯಾಗಿದ್ದು, ಪಿರ್ಯಾದುದಾರರ ಕುಟುಂಬದವರಾದ "ರಾಧಮ್ಮ" ಎನ್ನುವವರ ಹೆಸರನ್ನು ರಾಧಮ್ಮ ರಸ್ತೆಯೆಂದು ಹೆಸರಿಡಲಾಗಿರುತ್ತದೆ. ಶ್ರೀಧರ ಪೂಜಾರಿ ಎನ್ನುವವರು ಸದರಿ ರಾಧಮ್ಮ ರಸ್ತೆಯ ಬಾಜುವಿನಲ್ಲಿ ವಾಣಿಜ್ಯ ಕಟ್ಟಡ ಕಟ್ಟಲು ಪ್ರಾರಂಭಿಸಿದ್ದು, ಕಟ್ಟಡ ನಿಯಮಗಳನ್ನುಉಲ್ಲಂಘಿಸುತ್ತಿದ್ದಾರೆ. ಈ ಬಗ್ಗೆ ಕ್ರಮ ಜರುಗಿಸಲು ಎದುರುದಾರರಿಗೆ ಮನವಿ ಸಲ್ಲಿಸಿದರೂ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ರವರಿಗೆ ಮನವಿ ಸಲ್ಲಿಸಿದರೂ ಕ್ರಮ ಜರುಗಿಸಿರುವುದಿಲ್ಲ. ಆದುದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದರು.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

ತನಿಖಾ ಅವಧಿಯಲ್ಲಿ ಕಂಡುಬಂದ ಅಂಶಗಳು:

- ಶಿರ್ವ ಗ್ರಾಮ ಪಂಚಾಯತ್‌ನ ಸರ್ವೆ.ನಂ.309/13ಎ1ಪಿ4 ರಲ್ಲಿರುವ ಒಟ್ಟು 12.5 ಸೆಂಟ್ಸ್ ಸ್ಥಳವು ಶ್ರೀಧರ್ ಪೂಜಾರಿ ಬಿನ್ ಐತಪ್ಪ ಪೂಜಾರಿರವರ ಹೆಸರಿನಲ್ಲಿರುತ್ತದೆ. ಕಟ್ಟಡ ಪರವಾನಿಗೆ ಕೋರಿ ಅಗತ್ಯ ದಾಖಲೆಗಳೊಂದಿಗೆ ದಿನಾಂಕ:15.04.2013ರಂದು ಗ್ರಾಮ ಪಂಚಾಯತ್‌ಗೆ ಅರ್ಜಿ ಸಲ್ಲಿಸಿದ್ದರು. ದಿನಾಂಕ:18.05.2013ರ ಸಾಮಾನ್ಯ ಸಭೆಯಲ್ಲಿ ಅರ್ಜಿಯನ್ನು ಪರಿಶೀಲಿಸಿ ಷರತ್ತು ವಿಧಿಸಿ ಪರವಾನಿಗೆ ನೀಡಿರುತ್ತಾರೆ ಎಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಉಡುಪಿಯವರು ತಮ್ಮ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.
- ಶಿರ್ವ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿರವರ ವರದಿಯಲ್ಲಿ ಶ್ರೀಧರ ಪೂಜಾರಿ ಎಂಬುವವರು ಪಂಚಾಯಿತಿಗೆ ಸಲ್ಲಿಸಿದ ದಾಖಲೆಗಳ ಆಧಾರದಲ್ಲಿ ಪರವಾನಿಗೆ ನೀಡಿದ್ದು ಸದರಿಯವರ ಕಟ್ಟಡ ಮುಕ್ತಾಯಗೊಂಡಿರುತ್ತದೆ. ದೂರುದಾರರ ದೂರನ್ನು ಪಂಚಾಯತ್ ಪರಿಶೀಲಿಸಿದ್ದು, ಸದರಿಯವರು

ತಿಳಿಸುವ ರಸ್ತೆಯು ಪಂಚಾಯತ್ ರಸ್ತೆಯಾಗಿದ್ದು, ನಿಗದಿತ ಸೆಟ್ ಬ್ಯಾಕ್ ಬಿಟ್ಟು ಕಟ್ಟಡ ನಿರ್ಮಿಸಿರುವುದನ್ನು ಮನಗಂಡು ಕಟ್ಟಡಕ್ಕೆ ಕಟ್ಟಡ ನಂಬರ್ ನೀಡಲಾಗಿದೆ. ಸಾಮಾನ್ಯ ಸಭೆಯ ನಿರ್ಣಯದಂತೆ ಕಟ್ಟಡಕ್ಕೆ ನಂಬರ್ ಹಾಕಿ ವಿದ್ಯುತ್ ಜೋಡಣೆಗೆ ನಿರಾಪೇಕ್ಷಣ ಪತ್ರ ನೀಡಲಾಗಿದೆ ಎಂದು ವರದಿ ನೀಡಿರುತ್ತಾರೆ

- ಕಾರ್ಯಪಾಲಕ ಅಭಿಯಂತರರು-2, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವರದಿಯಲ್ಲಿ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ , ಉಡುಪಿ ಕಚೇರಿ ಸುತ್ತೋಲೆ ಸಂಖ್ಯೆ:12/2012-13 ದಿನಾಂಕ:06/08/2012ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನೆಲಮಹಡಿ +ಎರಡು ಮಹಡಿ ಕಟ್ಟಡಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ. ಆರೋಪಿತ ಕಟ್ಟಡವು ನೆಲಮಹಡಿ+ಎರಡು ಮಹಡಿ ನಿರ್ಮಾಣವಾಗಿರುವುದರಿಂದ, ಶಿರ್ವ ಗ್ರಾ.ಪಂಚಾಯತ್‌ರವರಿಂದ ಪರವಾನಿಗೆ ಪಡೆದಿರುವುದು ಗಮನಿಸಲಾಗಿರುತ್ತದೆ. ದೂರಿನಲ್ಲಿ ಮಾಡಿರುವ ಆರೋಪಗಳು ಸಾಬೀತಾಗಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಪಿರ್ಯಾದುದಾರರು, ಎದುರುದಾರರ ಆಕ್ಷೇಪಣೆಗಳನ್ನು, ತನಿಖಾಧಿಕಾರಿಗಳ ವರದಿಯ ಅಂಶಗಳನ್ನು ಪೂರ್ಣವಾಗಿ ನಿರಾಕರಿಸಿರುತ್ತಾರೆ ಹಾಗೂ ಜಿಲ್ಲಾಧಿಕಾರಿಗಳು ಉಡುಪಿರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತ್, ಉಡುಪಿ ರವರಿಗೆ ದಿನಾಂಕ:30.07.2012ರ ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ನು ನೀಡಿದ್ದು, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ವಂತ ವಾಸ್ತವ್ಯದ ಉದ್ದೇಶಕ್ಕೆ ನೆಲಅಂತಸ್ತು ಮತ್ತು ಮೊದಲನೆ ಮಹಡಿಯವರೆಗೆ ಆಯಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ನಿಯಮಾನುಸಾರ ಕಟ್ಟಡ ಕಟ್ಟಲು ಪರವಾನಿಗೆ ನೀಡುವಂತೆಯೂ ಹಾಗೂ ವಾಸ್ತವ್ಯೇತರ ಕಟ್ಟಡಗಳು, ಎರಡನೇ ಮಹಡಿ ಹಾಗೂ ಮೀರಿದ ವಸತಿ ಕಟ್ಟಡಗಳಿಗೆ ಹಾಗೂ ವಸತ ಸಮುಚ್ಚಯಗಳಿಗೆ(ಫ್ಲಾಟ್ಸ್) ಪರವಾನಿಗೆ ನೀಡುವ ಮೊದಲು ತಾಂತ್ರಿಕ ಅಭಿಪ್ರಾಯವನ್ನು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಉಡುಪಿ ಇವರಿಂದ ಕಡ್ಡಾಯವಾಗಿ ಪಡೆದುಕೊಳ್ಳಲು ತಿಳಿಸಲಾಗಿದೆ. ಆದುದರಿಂದ ಎದುರುದಾರರ ವಿರುದ್ಧ ಕ್ರಮಜರುಗಿಸಲು ಕೋರಿರುತ್ತಾರೆ.

ತನಿಖಾ ಅವಧಿಯಲ್ಲಿ 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಗಳನ್ನು ಪರಿಗಣಿಸಲು ಯೋಗ್ಯವಾಗಿರುವುದಿಲ್ಲ. ಸಂಗ್ರಹಿಸಿದ ಆಧಾರಗಳಿಂದ ಶ್ರೀಧರ್ ಪೂಜಾರಿರವರಿಗೆ ಶಿರ್ವ ಗ್ರಾಮದ ಸ.ನಂ.308/13ಎ/ಪಿ4 ಮತ್ತು 22ಪಿ3 ಜಾಗದಲ್ಲಿ ವಾಣಿಜ್ಯ ಕಟ್ಟಡ ಕಟ್ಟಲು ಪರವಾನಗಿ ನೀಡಿದ್ದು, ಸದರಿ ಅವಧಿಯಲ್ಲಿ ಎದುರುದಾರರು ಸದರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ನೀಡಿದ ನಕ್ಷೆಯನ್ನು ತಾಂತ್ರಿಕ ಅನುಮೋದನೆ ಲಗತಿಸದಿದ್ದರೂ, ಶ್ರೀಧರ್ ಪೂಜಾರಿರವರಿಗೆ ಪರವಾನಿಗೆ ನೀಡಿದ್ದು, ದಿನಾಂಕ:06.08.2012 ಮತ್ತು 30.07.2012ರ ಸುತ್ತೋಲೆಯ ನಿಯಮಗಳನ್ನು ಉಲ್ಲಂಘಿಸಿರುವುದು ತನಿಖಾ ಕಾಲದಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ(ನಡತೆ)ನಿಯಮ 1966ರ ನಿಯಮಗಳು (3)(ii) ರಿಂದ (iii)ರನ್ವಯ ಎದುರುದಾರರು ಶಿಸ್ತುಕ್ರಮಕ್ಕೆ ಬಾದ್ಯರಾಗಿರುತ್ತಾರೆಂದು ಕಮಡುಬಂದಿದ್ದರಿಂದ, 1ನೇ ಎದುರುದಾರರಾದ- ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವೆ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14-ಎ ರಡಿಯಲ್ಲಿ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವೆ(ವರ್ಗೀಕರಣ, ನಿಯಂತ್ರಣ ಮತ್ತು

ಮೇಲ್ಮನವಿ)ನಿಯಮಗಳು, 1957ರ ನಿಯಮ 14–ಎರನ್ವಯ ಪ್ರಕರಣವನ್ನು ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/260/ಗ್ರಾಪಂಕಾ/2018**
**ಬೆಂಗಳೂರು, ದಿನಾಂಕ:04-07-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿ, 1966ರ ನಿಯಮಗಳು 3(1)(ii) ಮತ್ತು (iii)ರನ್ವಯ "ದುರ್ನಡತೆ" ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ–8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

5/7/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು(ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ, ಪುಟ ಸಂಖ್ಯೆ 1 ರಿಂದ 188).
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
6. ಶ್ರೀಮತಿ ಮಾಲತಿ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.